ರಾಜ್ಯದಲ್ಲಿರುವ ಡಿ ಡಿ ಎಲ್ ಆರ್ ಮತ್ತು ಎ ಡಿ ಎಲ್ ಆರ್ ಗಳಲ್ಲಿ ಟೈಪಿಸ್ಟ್ ಹುದ್ದೆ ಮಂಜೂರು

513 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಕಂದಾಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಮ್ಮ ರಾಜ್ಯದಲ್ಲಿ ಎಷ್ಟು ಭೂಮಾಪನ ಉಪನಿರ್ದೇಶಕರ, ಸಹಾಯ ಭೂಮಾಪನ ಉಪನಿರ್ದೇಶಕರ ಕಛೇರಿಗಳಿವೆ?

ಆ) ಅವುಗಳಲ್ಲಿ ಎಷ್ಟು ಭೂಮಾಪನ ಉಪನಿರ್ದೇಶಕರ ಮತ್ತು ಭೂಮಾಪನ ಸಹಾಯಕ ನಿರ್ದೇಶಕರ ಕಛೇರಿಗಳಲ್ಲಿ ಟೈಪಿಸ್ಟ್ ಹುದ್ದೆಗಳಿವೆ ಹಾಗೂ ಇಲ್ಲದೇ ಇರುವಂತಹಗಳು ಎಷ್ಟು?

ಇ) ಟೈಪಿಸ್ಟ್ ಹುದ್ದೆ ಇಲ್ಲದವುಗಳಿಗೆ ಹುದ್ದೆ ಮಂಜೂರು ಮಾಡುವ ಆಲೋಚನೆ ಸರಕಾರಕ್ಕಿದೆಯೇ ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು.

ಈ) ಈಗ ಇರುವ ಹುದ್ದೆಗಳಲ್ಲಿ ಖಾಲಿ ಹುದ್ದೆಗಳು ಎಷ್ಟು ಹಾಗೂ ಯಾವಾಗ ಅವುಗಳನ್ನು ಭರ್ತಿ ಮಾಡಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) 14 ಭೂಮಾಪನ ಉಪ ನಿರ್ದೇಶಕರ ಕಛೇರಿಗಳು, 58 ಭೂಮಾಪನ ಸಹಾಯಕ ನಿರ್ದೇಶಕರ ಕಛೇರಿಗಳಿವೆ.

ಆ) 11 ಭೂದಾಖಲೆಗಳ ಉಪ ನಿರ್ದೇಶಕರು ಮತ್ತು 43 ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಗಳಿಗೆ ಟೈಪಿಸ್ಟ್ ಹುದ್ದೆಗಳಿವೆ. 3 ಉಪ ನಿರ್ದೇಶಕರು, 15 ಸಹಾಯಕ ನಿರ್ದೇಶಕರ ಕಛೇರಿಗಳಿಗೆ ಟೈಪಿಸ್ಟ್ ಹುದ್ದೆಗಳಿಲ್ಲ.

ಇ) ಇದೆ. ಆರ್ಥಿಕ ಪರಿಸ್ಥಿತಿಯನ್ನು ಅನುಸರಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಈ) 13 ಹುದ್ದೆಗಳು ಖಾಲಿ ಇವೆ. ಆರ್ಥಿಕ ಮಿತವ್ಯಯದ ಕಾನೂನನ್ನು ಸಡಿಲಿಸಿದ ಮೇಲೆ ಭರ್ತಿ ಮಾಡಲಾಗುವುದು.

ಅರಣ್ಯ ಕೃಷಿ ಪದವಿಯನ್ನು ಸರ್ಕಾರ ಮಾನ್ಯತೆ ಮಾಡುವುದರ ಬಗ್ಗೆ

515 - ಶ್ರೀ ಎಸ್. ಆರ್. ಮೋರೆ (ಧಾರವಾಡ): ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಕೃಷಿ ವಿಶ್ವವಿದ್ಯಾಲಯದಲ್ಲಿ ನೀಡುತ್ತಿರುವ ಅರಣ್ಯ ಕೃಷಿ (ಬಿ.ಎಸ್ಸಿ. ಪಾರೆಸ್ಟ್) ಪದವಿಯನ್ನು ಸರ್ಕಾರ ಯಾವಾಗ ಮಾನ್ಯತೆ ಮಾಡಲಾಗುವುದು;

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಸರ್ಕಾರದ ಆದೇಶದನ್ವಯ ಪದವಿಯನ್ನು ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಪ್ರಾರಂಭಿಸಲಾಗಿದ್ದು ಸರ್ಕಾರದ ಮಾನ್ಯತೆ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಸರ್ಕಾರಿ ಅನಾಧೀನ ಜಮೀನಿನ ಬಗ್ಗೆ

518 - ಶ್ರೀ ಕೆ. ಕುಶಾಲ, (ಸುಳ್ಯ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರಿ ಒತ್ತುವರಿ ಜಮೀನುಗಳನ್ನು ಅಕ್ರಮ ಅನುಭವ ಮಾಡಿಕೊಂಡು ಬರುವ ಕುಳವಾರುಗಳ ಸಂಖ್ಯೆ ಎಷ್ಟು? (ಜಿಲ್ಲಾವಾರುಮಾಹಿತಿಯನ್ನು ಒದಗಿಸುವುದು);

ಆ) ಅಕ್ರಮ ಸಾಗುವಳಿ ಮಾಡಿಕೊಂಡು ಬರುವ ಒತ್ತುವರಿ ಜಮೀನುಗಳ ವಿಸ್ತೀರ್ಣ ಎಷ್ಟು?

ಇ) ಸದ್ರಿ ಒತ್ತುವರಿ ಜಮೀನುಗಳ ಅಕ್ರಮವನ್ನು ಸಕ್ರಮಗೊಳಿಸಲು ಸರ್ಕಾರ

ಕೈಗೊಂಡ ಕ್ರಮಗಳಾವುವು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) 3,17,328 ಜನರು (ಪ್ಲಾಂಟೇಷನ್ ಮತ್ತು ಕೃಷಿಯೇತರ ಬಾಬುಗಳನ್ನು ಹೊರತು ಪಡಿಸಿ (ದಿ: 1-1-1988 ರಂತೆ) (ಜಿಲ್ಲಾವಾರು ಮಾಹಿತಿಯನ್ನು ಲಗತ್ತಿಸಿದೆ)

ಆ) 6,23,171 ಎಕ್ರೆಗಳು.

ಇ) ರಾಜ್ಯದಲ್ಲಿರುವ ಅನಧಿಕೃತ ಸಾಗುವಳಿಗಳನ್ನು ಸಕ್ರಮಗೊಳಿಸುವುದಕ್ಕಾಗಿ ಕರ್ನಾಟಕ ಭೂ ಕಂದಾಯ ಕಾಯಿದೆ 1964ಕ್ಕೆ ಕಲಂ 94 (ಎ) ಅನ್ನು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಕಾಯಿದೆ, 1990 ರಂತೆ ಸೇರಿಸಲಾಗಿದೆ. ಇಂತಹ ಅನಧಿಕೃತ ಸಾಗುವಳಿಗಳನ್ನು ಸಕ್ರಮಗೊಳಿಸುವ ಕಾರ್ಯ ವಿಧಾನಗಳನ್ನು, ಸದ್ಯದಲ್ಲಿಯೇ ಹೊರಡಿಸಲಿರುವ ಮೇಲಿನ ತಿದ್ದುಪಡಿ ಕಾಯಿದೆಯನ್ವಯ ತಯಾರಿಸಿರುವ ನಿಯಮಾವಳಿಗನುಸಾರವಾಗಿ ಮಾಡಲಾಗುತ್ತದೆ.

Extent in Acres & Gun.

ANNEXURE.

Sl. No. District	persons	Extent
01. Bangalore (Rural)	28,180	47,687.35
02. Bangalore (Urban)	5,798	7,525.22
03. Belgaum	361	996.02
04. Bellary	16,822	27,383.08
05. Bidar	2,971	8,773.39
06. Bijapur	553	1,062.34
07. Chickmagalur	14,074	35,553.19
08. Chitradurga	21,914	48,113.04
09. Dakshina Kannada	25,517	30,353.38
10. Dharwad	2,913	7,695.22
11. Gulbarga	5,363	16,877.03
12. Hassan	39,032	76,278.22
13. Kodagu	1,762	1,882.10
14. Kolar	44,219	83,761.06
15. Mandya	13,800	18,360.08
16. Mysore	17,647	4,462.18
17. Raichur	4,612	13,386.12
18. Shimoga	22,112	43,899.35
19. Tumkur	42,135	82,458.13
20. Uttara Kannada	7,517	19,768.02
	3,17,328	6,23,171.32